## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **228** |
| ಉತ್ತರಿಸಬೇಕಾದ ದಿನಾಂಕ | : | 14.09.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅತಿಯಾದ ಮಳೆಯಿಂದಾಗಿ ಕೆಲವು ಜಿಲ್ಲೆಗಳಲ್ಲಿ ಭಾಗಶ: ಪೂರ್ಣ ಮನೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಬಂದಿದೆ.<br><br>ಮಳೆ/ಪ್ರವಾಹದಿಂದ ಹಾನಿಗೊಳಗಾದ ಕುಟುಂಬಗಳಿಗೆ ವಸತಿ ಸೌಕರ್ಯ ಒದಗಿಸಲು ಸರ್ಕಾರವು ನೆರೆ ಸಂತ್ರಸ್ಥರ ಪುನರ್ವಸತಿ ಯೋಜನೆಯನ್ನು ಜಾರಿಗೊಳಿಸಿರುತ್ತದೆ. |
| ಆ) | ಹಾನಿಗೊಳಗಾದ ಮನೆಗಳಿಗೆ ಸರ್ಕಾರದಿಂದ ನೀಡಿರುವ ತಾತ್ಕಾಲಿಕ ಪರಿಹಾರಗಳೇನು ; | 2021 ಮತ್ತು 2022ನೇ ಸಾಲಿನಲ್ಲಿ ಮಳೆ/ಪ್ರವಾಹ/ ಅತಿವೃಷ್ಟಿಯಿಂದ ಸಂಪೂರ್ಣ ಮತ್ತು ಭಾಗಶಃ ಹಾನಿಗೊಳಗಾದ ಮನೆಗಳ ಸಂತ್ರಸ್ಥರಿಗೆ SDRF/NDRF ಮಾರ್ಗಸೂಚಿಯಂತೆ ರೂ.95,100/-ಗಳನ್ನು ಹಾಗೂ ಅಲ್ಪ ಸ್ವಲ್ಪ ಹಾನಿಗೊಳಗಾದ ಮನೆಗಳಿಗೆ ತಲಾ ರೂ.50,000/-ಗಳ ತಾತ್ಕಾಲಿಕ ಪರಿಹಾರವನ್ನು ಕಂದಾಯ ಇಲಾಖೆ(ಜಿಲ್ಲಾಧಿಕಾರಿಗಳ ಪಿಡಿ ಖಾತೆ) ಯಿಂದ ನೀಡಲಾಗುತ್ತಿದೆ. |
| ಇ) | ಮನೆ ಕಳೆದುಕೊಂಡ ನಿರಾಶ್ರಿತರಿಗೆ ಪೂರ್ಣ ಪ್ರಮಾಣದಲ್ಲಿ ಮನೆ ಕಟ್ಟಿಕೊಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ? | ಸರ್ಕಾರದ ಆದೇಶ/ಮಾರ್ಗಸೂಚಿಗಳನ್ವಯ ನೆರೆ ಹಾವಳಿಗೆ ತುತ್ತಾಗಿ ಹಾನಿಗೊಳಗಾದ ಮನೆಗಳ ಹಾನಿ ಪ್ರಮಾಣವನ್ನು ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಸಮೀಕ್ಷೆ ಮಾಡಿ ಹಾನಿಗೊಳಗಾದ ಮನೆಯ ಹಾನಿ ಪ್ರಮಾಣಕ್ಕೆ ಅನುಗುಣವಾಗಿ ಮನೆಯ ವರ್ಗವನ್ನು ಎ, ಬಿ**2**, ಬಿ**1** ಮತ್ತು ಸಿ ಎಂದು ವಿಂಗಡಿಸಿ, ತಹಸೀಲ್ದಾರ್ ರವರು ನಮೂದಿಸಿ, ಜಿಲ್ಲಾಧಿಕಾರಿಗಳಿಂದ ಅನುಮೋದನೆಗೊಂಡ ಫಲಾನುಭವಿಗಳು ನಿರ್ಮಿಸಿರುವ ಮನೆಗಳ ವಿವಿಧ ಹಂತಗಳ ಜಿಪಿಎಸ್ ಛಾಯಾಚಿತ್ರಗಳನ್ನು ಗ್ರಾಮೀಣ ಪ್ರದೇಶದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ನಗರ ಪ್ರದೇಶದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಪುನರ್ವಸತಿ ಮೊಬೈಲ್ ಆ್ಯಪ್ ಮೂಲಕ ಜಿಪಿಎಸ್ ಮಾಡಿದ ನಂತರ ತಹಶೀಲ್ದಾರ್ ರವರು ಪರಿಶೀಲಿಸಿ, ಅರ್ಹಗೊಳಿಸಿ (Audit), ಅನುದಾನ ದೃಢೀಕರಣ (Payment Certification) ನೀಡಿದ ಪ್ರಗತಿಯಲ್ಲಿರುವ ಎಲ್ಲಾ ಮನೆಗಳಿಗೆ ಪ್ರಗತಿಗೆ ಅನುಗುಣವಾಗಿ DBT ಆಧಾರ್ ಆಧಾರಿತವಾಗಿ ಫಲಾನುಭವಿಗಳ ಖಾತೆಗೆ ಪರಿಹಾರಧನ ಪಾವತಿಸಲಾಗುತ್ತಿದೆ.<br><br>ಸರ್ಕಾರವು ಹಾನಿಗೊಳಗಾದ ಮನೆಗಳ ಹಾನಿ ಪ್ರಮಾಣಕ್ಕೆ ಅನುಗುಣವಾಗಿ ವರ್ಗ ವಿಂಗಡಣೆ ಹಾಗೂ ನಿಗಧಿಪಡಿಸಲಾದ ಪರಿಹಾರಧನದ ವಿವರ ಈ ಕೆಳಕಂಡಂತಿದೆ. |

| ಕ್ರ. ಸಂ. | ಹಾನಿಯಾದ ಮನೆಯ ಪ್ರಮಾಣ | ಮನೆಯ ವರ್ಗ | ನಿಗದಿಪಡಿಸಲಾದ ಪರಿಹಾರ ಮೊತ್ತ |
|---|---|---|---|

| | | | |
|---|---|---|---|
| 1 | ಶೇ. 75ಕ್ಕಿಂತ ಹೆಚ್ಚು | ಸಂಪೂರ್ಣ ಮನೆ ಹಾನಿ-ಎ | ರೂ.5.00ಲಕ್ಷಗಳು |
| 2 | ಶೇ.25 ರಿಂದ 75ರಷ್ಟು | ಭಾಗಶಃ ಮನೆ ಹಾನಿ (ಪುನರ್ ನಿರ್ಮಾಣ)-ಬಿ2 | ರೂ.5.00ಲಕ್ಷಗಳು |
| 3 | | ಭಾಗಶಃ ಮನೆ ಹಾನಿ (ದುರಸ್ಥಿ)-ಬಿ1 | ರೂ.3.00ಲಕ್ಷಗಳು |
| 4 | ಶೇ.15 ರಿಂದ 25ರಷ್ಟು | ಅಲ್ಪಸ್ವಲ್ಪ ಮನೆ ಹಾನಿ-ಸಿ | ರೂ.50,000/-ಗಳು |
| 5 | ಅನಧಿಕೃತ ಮನೆಗಳು (ಇರುವ ಜಾಗದಲ್ಲಿಯೇ ನಿರ್ಮಿಸಿಕೊಳ್ಳುವ ಮನೆಗಳು) | | ರೂ.1.00ಲಕ್ಷ |

ಸರ್ಕಾರದ ಆದೇಶ ಸಂಖ್ಯೆ:ವಇ 78 ಹೆಚ್‌ಎಂ 2019, ದಿನಾಂಕ: 14.08.2019 ರಲ್ಲಿ ತಿಳಿಸಿರುವಂತೆ ಫಲಾನುಭವಿ ಮನೆಯನ್ನು ಸ್ವಂತ ನಿರ್ಮಾಣ ಮಾಡುವುದರಿಂದ ಗುಣಮಟ್ಟದ ಮನೆಯನ್ನು ತ್ವರಿತಗತಿಯಲ್ಲಿ ನಿರ್ಮಿಸಲು ಹಾಗೂ ಹಾನಿಗೊಳಗಾದ ಮನೆಯ ಹಳೆಯ ಸಾಮಾಗ್ರಿಗಳನ್ನು ಉಪಯೋಗಿಸಲು ಸಹಾಯವಾಗುವುದರಿಂದ ಫಲಾನುಭವಿಗಳೇ ಸ್ವತಃ ಮನೆಯನ್ನು ಪುನರ್ ನಿರ್ಮಾಣ/ದುರಸ್ಥಿ ಮಾಡಿ ಕೊಳ್ಳಲು ಅವಕಾಶ ನೀಡಲಾಗಿದ್ದು, ಅದರಂತೆ ಫಲಾನುಭವಿಗಳೇ ಮನೆಗಳನ್ನು ನಿರ್ಮಿಸಿ ಕೊಳ್ಳುತ್ತಿದ್ದಾರೆ.

ಸಂಖ್ಯೆ :ವಇ 363 ಹೆಚ್‌ಎಂ 2022

**(ವಿ. ಸೋಮಣ್ಣ)**
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು